# ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿತ್ತಾಪೂರ.

## ಸಿಸಿ ನಂ.1164/20222

**ಫಿರ್ಯಾದಿಃ** ಕರ್ನಾಟಕ ಸರಕಾರ ಪರವಾಗಿಃ **ವಾಡಿ ಪೊಲೀಸ್ ಠಾಣೆ.**

**-:: ವಿರುದ್ಧ ::-**

**ಆರೋಪಿ/ತರುಃ**

1. ಸಂಗೀತಾ ಗಂಡ ಆನಂದ ಚವ್ಹಾಣ ,
ವಃ 32 ವರ್ಷ, ಉಃ ಮನೆ ಕೆಲಸ,

2. ಆನಂದ ತಂದೆ ದೇವ್ಲಾ ಚವ್ಹಾಣ,
ವ: 40 ವರ್ಷ, ಉ: ಚಾಲಕ,
ಇಬ್ಬರೂ ಸಾ: ಕಮಲಿಬಾಯಿ ದರ್ಗಾ ಏರಿಯಾ ವಾಡಿ,
ತಾ: ಚಿತ್ತಾಪೂ

**********

**-:: ದೋ ಷಾ ರೋ ಪ ಣೆ ::-**

ನಾನು ಶ್ರೀ ಸಂತೋಷಕುಮಾರ ದೈವಜ್ಞ, ಬಿ.ಕಾಂ. ಎಲ್.ಎಲ್.ಬಿ. (ಸ್ಪೆಷಲ್), ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಚಿತ್ತಾಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ಮೊದಲನೆಯದಾಗಿ ದಿನಾಂಕ 10-09-2021 ರಂದು ಸಂಜೆ 04:30 ಗಂಟೆ ಸುಮಾರಿಗೆ ವಾಡಿ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ವಾಡಿ ಪಟ್ಟಣದ ಕಮಲಿಬಾಬಾ ದರ್ಗಾ ಏರಿಯಾದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಒಂದೂಗೂಡಿಕೊಂಡು, ಚಾಸಾ-1 ರವರು ಖರ್ಚಿಗೆ ಹಣ ಕೊಡು ಅಂತಾ 2ನೇ ಆರೋಪಿತನಿಗೆ ಕೇಳಿದಾಗ ಆಗ 1ನೇ ಆರೋಪಿತಳಾದ ನೀನು ಚಾಸಾ-1 ರವರಿಗೆ " ರಂಡಿ ಚೀನಾಲಿ ನೀನೇನು ರೊಕ್ಕ ಗಳಿಸಿ ಕೊಟ್ಟಿದ್ದಿ" ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂಃ 504 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕದಂದು, ಸಮಯದಂದು ಮತ್ತು ಸ್ಥಳದಲ್ಲಿ, 1 ಮತ್ತು 2ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಕೂಡಿಕೊಂಡು, 2ನೇ ಆರೋಪಿಯಾದ ನೀನು ಚಾಸಾ-1 ರವರಿಗೆ ಕೈಯಿಂದ ಹೊಡೆ ಬಡೆ ಮಾಡಿ ಗುಪ್ತಗಾಯ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂಃ 323 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕದಂದು, ಸಮಯದಂದು ಮತ್ತು ಸ್ಥಳದಲ್ಲಿ, 1 ಮತ್ತು 2ನೇ

ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಕೂಡಿಕೊಂಡು, ಚಾಸಾ-1 ರವರು ಠಾಣೆಗೆ ಹೋಗುತ್ತೇನೆ ಎಂದು ಹೊರಟಾಗ, 1ನೇ ಆರೋಪಿಯಾದ ನೀನು ಚಾಸಾ-1 ರವರನ್ನು ಮುಂದಕ್ಕೆ ಹೋಗದಂತೆ ಅಕ್ರಮವಾಗಿ ದಾರಿ ತಡೆದು ನಿಲ್ಲಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂಃ 341 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕದಂದು, ಸಮಯದಂದು ಮತ್ತು ಸ್ಥಳದಲ್ಲಿ, 1 ಮತ್ತು2ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಕೂಡಿಕೊಂಡು, ಆರೋಪಿತರಾದ ನೀವು ಚಾಸಾ-1 ರವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೇದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂಃ 506 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಆರೋಪಿತನ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಆ:1 ಆ:2

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಆ:1 ಆ:2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ 28-08-2024

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ. ಚಿತ್ತಾಪೂರ.**